


ವನ್ಯಧಾಮದಲ್ಲೇ ತೈಲಕ್ಕಾಗಿ ಭೈರಿಗೆ



ಕಾಡುಕೋಣ, ಕಾಡುಹಂದಿ, ಕಾಡುನಾಯಿ, ಕಾಡುಕುರಿ, ಕಾಡುಕೋಳಿ, ಕಾಡುಬೆಕ್ಕು – ಇವಕ್ಕೆ ತತ್ಸಮವಾಗಿ ಸಾಕಿದ ಪ್ರಾಣಿಗಳೂ ಇವೆ. ಮನುಷ್ಯ ಹತ್ತು ಸಾವಿರ ವರ್ಷಗಳ ಹಿಂದೆ ಕೃಷಿಗೆ ಇಳಿದಾಗ, ತನಗೆ ಬೇಕಾದ ಪ್ರಾಣಿಗಳನ್ನು ಪಳಗಿಸುತ್ತ ಬಂದ. ಮಾಂಸಾಹಾರಿ ಪ್ರಾಣಿಗಳಿಗಿಂತ ಸಸ್ಯಾಹಾರಿ ಪ್ರಾಣಿಗಳನ್ನು ಪಳಗಿಸುವುದು ಸುಲಭವಾಗಿತ್ತು. ಹೀಗಾಗಿಯೇ ದನ, ಕುರಿ, ಮೇಕೆ, ಕೋಳಿ ಬಹು ಬೇಗ ಮನುಷ್ಯನ ವಶಕ್ಕೆ ಬಂದವು. ಆನೆ ಈಗಲೂ ಕಾಡುಪ್ರಾಣಿಯೇ. ಪಳಗಿಸಿದರೆ ಮಾತ್ರ ಅಂಥವರ ಮಾತು ಕೇಳುತ್ತದೆ ತಾನೆ? ಹಂದಿಗಳನ್ನು ಹಿಡಿಯಲು ಹೋದರೆ ಗುಟುರು ಹಾಕುತ್ತವೆ, ಅವಕ್ಕೆ ಯಾರೂ ಮೂಗುದಾರ ಹಾಕುವುದಿಲ್ಲ. ಆ ಅರ್ಥದಲ್ಲಿ ಅದರದು ಈಗಲೂ ವನ್ಯಜೀವಿಯ ವರ್ತನೆಯೇ.

ಚರಿತ್ರೆ ಓದಿದವರಿಗೆ ವಿಶೇಷವಾಗಿ ನಾಗರಿಕತೆಯ ಬಗ್ಗೆ ಆಸಕ್ತಿ ಇದ್ದವರಿಗೆ ಒಂದು ವಿಚಾರ ಸ್ಪಷ್ಟ. ಮನುಷ್ಯ ತನ್ನ ಬಳಕೆಗಾಗಿ ಕುದುರೆಗಳನ್ನು ಪಳಗಿಸಿ ಸುಮಾರು ಆರು ಸಾವಿರ ವರ್ಷಗಳೇ ಆಗಿವೆ. ಕೃಷಿಗಿಳಿಯುವ ಮೊದಲು